<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.</u>

<u>ಸಿ.ಸಿ.ನಂ.**81/2021**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | ಶಶಿಕಲಾ ಜಂಗ್ಲಿ | ಸಿಡಬ್ಲ್ಯೂ | 1 |
| ಗಂಡನ ಹೆಸರು | ಬಸವರಾಜ | ಪಿಡಬ್ಲ್ಯೂ | 1 |
| ವಯಸ್ಸು | 63 ವರ್ಷ | | |
| ಉದ್ಯೋಗ | ಗೃಹಿಣಿ | | |
| ವಾಸಸ್ಥಳ | ಹಾವೇರಿ | | |

<u>ದಿಃ **18.07.2025** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಮುಖ್ಯ ವಿಚಾರಣೆಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.</u>

**1).** ದಿನಾಂಕಃ 17.02.2019 ರಂದು ಸಾಯಂಕಾಲ 5-30 ಘಂಟೆಗೆ ನಾನು ಹಾವೇರಿಯ ವಿದ್ಯಾನಗರದ 3 ನೇ ಕ್ರಾಸನಲ್ಲಿ ಅಬಕಾರಿ ಇಲಾಖೆಯ ಕಛೇರಿಯ ಹಿಂದುಗಡೆ ರಸ್ತೆಯ ಮೇಲೆ ಒಬ್ಬಳೇ ನಡೆದುಕೊಂಡು ಹೋದಾಗ ಆಗ ಇಬ್ಬರೂ ವ್ಯಕ್ತಿಗಳು ನನ್ನ ಎದುರುಗಡೆಯಿಂದ ಒಂದು ಕಪ್ಪು ಬಣ್ಣದ ಮೋಟಾರ ಸೈಕಲ್ ಮೇಲೆ ಬಂದು ನನ್ನ ಕೊರಳಿನಲ್ಲಿರುವ ನನ್ನ ಬಂಗಾರದ ಚೈನನ್ನು ಕಟ್ ಮಾಡಿ ತಮ್ಮ ಕೈಯಲ್ಲಿ ಎಳೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ಸದರ ಮೋಟಾರ ಸೈಕಲ್ ಮೇಲೆ ಕುಳಿತಿದ್ದ ಹಿಂದುಗಡೆ ಕುಳಿತ ವ್ಯಕ್ತಿಯನ್ನು ನಾನು ನೋಡಿದ್ದೇನೆ. ಆದರೆ ಮೋಟಾರ ಸೈಕಲ್ ಮುಂದುಗಡೆ ಇರುವ ವ್ಯಕ್ತಿ ನನಗೆ ಕಂಡಿರುವದಿಲ್ಲ. ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯೇ ಮೋಟಾರ ಸೈಕಲ್ ಹಿಂದುಗಡೆ ಕುಳಿತ ವ್ಯಕಿತಯಾಗಿದ್ದಾನೆ.

**2)** ನಂತರ ಪೊಲೀಸ ಠಾಣೆಗೆ ಹೋಗಿ ಪಿರ್ಯಾದಿಯನ್ನು ಕೊಟ್ಟಿದ್ದೇನೆ. ಪಿರ್ಯಾದಿಯನ್ನು ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ನಾನು ಪಿರ್ಯಾದಿ ಕೊಟ್ಟ ಮಾರನೇ ದಿವಸವೇ ಪೊಲೀಸರು ಪ್ರಾ.ಸಾ-2 ಮತ್ತು 3 ಇವರನ್ನು ಕರೆದುಕೊಂಡು ನಾನು ಮತ್ತು ಪೊಲೀಸರು ಎಲ್ಲರೂ ಸೇರಿ ಘಟನಾ ಸ್ಥಳಕ್ಕೆ ಹೋಗಿ ನಾನು ತೋರಿಸಿದ ಘಟನಾ ಸ್ಥಳದಲ್ಲಿ ಪೊಲೀಸರು ಘಟನಾ ಸ್ಥಳದ ಪಂಚನಾಮೆಯನ್ನು ಬರೆದಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ನಿ.ಪಿ-2 ಎಂದು , ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಪೊಲೀಸರು ಘಟನಾ ಸ್ಥಳದಲ್ಲಿ ತೆಗೆದ ಕಚ್ಚಾ ನಕಾಶೆಯನ್ನು ನೋಡುತ್ತಿದ್ದು, ಅದನ್ನು ನಿ.ಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು

ಗುರುತಿಸಲಾಯಿತು. ಘಟನಾ ಸ್ಥಳದಲ್ಲಿ ತೆಗೆದ ಎರಡು ಪೋಟೋಗಳನ್ನು ನಿ.ಪಿ-4 ಮತ್ತು 5 ಎಂದು ಗುರುತಿಸಲಾಯಿತು.

3) ಘಟನೆಯಾದ ನಂತರ ಎಪ್ರಿಲ್ ತಿಂಗಳಲ್ಲಿ ಪೊಲೀಸರು ನನ್ನ ಪೊಲೀಸ ಠಾಣೆಗೆ ಕರೆಯಿಸಿ ಪೊಲೀಸ ಠಾಣೆಯಲ್ಲಿದ್ದ ಇಬ್ಬರೂ ವ್ಯಕ್ತಿಗಳನ್ನು ತೋರಿಸಿ ಆರೋಪಿಗಳನ್ನು ಗುರುತಿಸಲು ಕೇಳಿದಾಗ ಅದರಲ್ಲಿ ಕೇವಲ ಒಬ್ಬ ವ್ಯಕ್ತಿಯನ್ನು ಮಾತ್ರ ನೋಡಿ ಗುರುತಿಸಿರುತ್ತೇನೆ. ನನಗೆ ಮೋಟಾರ ಸೈಕಲ್ ಹಿಂದುಗಡೆ ಕುಳಿತಿದ್ದ ಆರೋಪಿಯ ಹೆಸರು ಅಬುತಾಲಿಬ್ ಈರಾನಿ ಅಂತಾ ಪೊಲೀಸರು ನನಗೆ ತಿಳಿಸಿರುತ್ತಾರೆ. ಅದೇ ರೀತಿ ಇನ್ನೊಬ್ಬ ಆರೋಪಿಯ ಹೆಸರು ಸುಲ್ತಾನ ಅಲಿ ಅಂತಾ ಪೊಲೀಸರು ನನಗೆ ತಿಳಿಸಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ. ಆರ್.ಎ.ಕೆ ವಕೀಲರಿಂದಃ **2** ನೇ ಆರೋಪಿ ಪರವಾಗಿಃ</u>

4) ಹಾವೇರಿಯ ಬಸವೇಶ್ವರನಗರದಲ್ಲಿರುವ ನಮ್ಮ ಮನೆಯಿಂದ ನಮ್ಮ ಸಂಬಂಧಿಕರ ಮನೆಗೆ ಬೆಳಗಿನ 12-00 ಘಂಟೆಗೆ ಹೋಗಿದ್ದೇನು. ನಮ್ಮ ಸಂಬಂಧಿಕರ ಮನೆ ತಲುಪಲು ಒಂದು 10 ನಿಮಿಷ ಸಮಯ ಬೇಕಾಗಿತ್ತು. ನಮ್ಮ ಸಂಬಂಧಿಕರ ಮನೆಗೆ ಹೋಗಬೇಕಾದರೆ ನಾನು ಆಟೋರಿಕ್ಷಾದಲ್ಲಿ ಹೋಗಿರುತ್ತೇನೆ ಮತ್ತು ಬರಬೇಕಾದರೆ ನಡೆದುಕೊಂಡು ಬರುತ್ತೇನೆ. ನಾನು ನಮ್ಮ ಮನೆಗೆ ನಡೆದುಕೊಂಡು ಮರಳಿ ಬೇಕಾದರೆ ಅಬಕಾರಿ ಇಲಾಖೆಯ ಹಿಂದುಗಡೆ ಇರುವ ರಸ್ತೆ ಕಚ್ಚಾ ರಸ್ತೆಯಾಗಿರುತ್ತದೆ ಅಂದರೆ ಸರಿ. ಕಚ್ಚಾ ರಸ್ತೆಯಲ್ಲಿ ವಾಹನ ವೇಗವಾಗಿ ಹೋಗಲು ಬರುವದಿಲ್ಲ ಅಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ನಾನು ನಮ್ಮ ಮನೆಗೆ ಮರಳಿ ಹೊರಟಾಗ ಆ ರಸ್ತೆಯಲ್ಲಿ ಯಾರು ಇರಲಿಲ್ಲ.

5) ಇಬ್ಬರೂ ವ್ಯಕ್ತಿಗಳು ನನ್ನ ಎದುರುಗಡೆ ಬಂದ ಮೋಟಾರ ಸೈಕಲನ ನೊಂದಣಿ ಸಂಖ್ಯೆ ಹೇಳಲು ಆಗುವದಿಲ್ಲ. ಸದರಿ ದಿವಸ ಯಾವುದೇ ವ್ಯಕ್ತಿಗಳು ಕಪ್ಪು ಬಣ್ಣದ ಮೋಟಾರ ಸೈಕಲ್ ಮೇಲೆ ಬಂದಿಲ್ಲ ಮತ್ತು ಸದರಿ ವ್ಯಕ್ತಿಗಳು ನನ್ನ ಕೊರಳಿನಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಹೋಗಿಲ್ಲ ಅಂದರೆ ಸರಿಯಲ್ಲ. ಘಟನಾ ಸ್ಥಳದ ಪಂಚನಾಮೆಯನ್ನು ಘಟನೆಯಾದ ಮಾರನೇ ದಿವಸ ಮಾಡಿರುತ್ತಾರೆ. ಆ ರೀತಿ 18 ನೇ ತಾರೀಖಿಗೆ ಘಟನಾ ಸ್ಥಳದ ಪಂಚನಾಮೆ ಮಾಡುವಾಗ ನಮ್ಮ ಜೊತೆ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಸಹ ಇದ್ದ. ಸದರಿ ಘಟನಾ ಸ್ಥಳದ ಪಂಚನಾಮೆಯನ್ನು ಬೆಳಗಿನ 10-00 ಘಂಟೆಯಿಂದ 11-00 ಘಂಟೆಯವರೆಗೆ

ಮಾಡಿರುತ್ತಾರೆ. ಸದರಿ ಘಟನಾ ಸ್ಥಳದ ಪಂಚನಾಮೆ ಬರೆಯಬೇಕಾದರೆ ನನ್ನ ಜೊತೆ ಪೊಲೀಸರು ಮತ್ತು ಇಬ್ಬರೂ ಸಾಕ್ಷಿದಾರರು ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿಯು ಸಹ ಇದ್ದ. ಇಬ್ಬರೂ ಸಾಕ್ಷಿದಾರರ ಹೆಸರು ಪ್ರದೀಪ ಮತ್ತು ವಿನಾಯಕ ಅಂತಾ ಪೊಲೀಸರು ಹೇಳಿದ ನಂತರ ತಿಳಿದು ಬಂದಿರುತ್ತದೆ ಅಂದರೆ ಸರಿಯಲ್ಲ. ಸದರಿ ಪ್ರದೀಪ ಮತ್ತು ವಿನಾಯಕ ಇವರು ನನಗೆ ಪರಿಚಯ ಇರುವದಿಲ್ಲ. ಇಬ್ಬರ ಹೆಸರುಗಳು ಪೊಲೀಸರು ಹೇಳಿದ ನಂತರ ನನಗೆ ಗೊತ್ತಿರುತ್ತದೆ. ಪೊಲೀಸರು ಘಟನಾ ಸ್ಥಳದ ಪಂಚನಾಮೆಯನ್ನು ಬರೆದ ನಂತರ ಸಹಿ ಮಾಡಲು ಹೇಳಿದಾಗ ನಾನು ಕೇವಲ ಸಹಿ ಮಾತ್ರ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಾನು ಹೇಳಿದಂತೆ ಪ್ರಕರಣದಲ್ಲಿ ಹೇಳಿದಂತಹ ಸ್ಥಳದಲ್ಲಿ ಯಾವುದೇ ಘಟನೆ ನಡೆಯದೇ ಇದ್ದರೂ ಸುಳ್ಳು ಪಿರ್ಯಾದಿ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ . ಆರೋಪಿಯ ಹೆಸರು ಅಬುತಾಲಿಬ ಅಂತಾ ಪೊಲೀಸರ ಹೇಳಿದ ನಂತರ ಆತನ ಹೆಸರು ತಿಳಿದು ಬಂದಿರುತ್ತದೆ ಅಂದರೆ ಸರಿ. ನನಗೆ ಆರೋಪಿಗಳ ಹೆಸರು ಮತ್ತು ವಿಳಾಸ ಇಲ್ಲದೇ ಇದ್ದರೂ ಸಹ ನಾನು ಆ ಕುರಿತಾಗಿ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯು ನನ್ನ ಸರವನ್ನು ಕಿತ್ತುಕೊಂಡು ಹೋಗದೇ ಇದ್ದರೂ, ಸದರಿ ಆರೋಪಿಯ ವಿರುದ್ಧ ಪಿರ್ಯಾದಿಯನ್ನು ಕೊಟ್ಟಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.